# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 3
Volume 1 Issue 3
ಮಂಗಳವಾರ 15-09-2015
Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444

ಮೈಸೂರು
ಪುಟ 4
ಬೆಲೆ ₹2

# ಬಿಬಿಎಂಪಿ ಉಪಮೇಯರ್ ಜೆಡಿಎಸ್‌ನ ಎಸ್.ಪಿ. ಹೇಮಲತಾ



ಇತ್ತೀಚೆಗೆ ನಡೆದ ಬಿಬಿಎಂಪಿ ಚುನಾವಣೆಯಲ್ಲಿ ಗೆದ್ದಿದ್ದ 198 ಕಾರ್ಪೊರೇಟರ್‌ಗಳು ಪ್ರಾದೇಶಿಕ ಆಯುಕ್ತೆ ಎಂ.ವಿ. ಜಯಂತಿರವರ ಅಧ್ಯಕ್ಷತೆಯಲ್ಲಿ ಪ್ರಮಾಣ ವಚನವನ್ನು ಪಡೆದರು.

ತದನಂತರ ಮಡಿವಾಳ ವಾರ್ಡ್‌ನ ಕಾಂಗ್ರೆಸ್ ಪಕ್ಷದ ಬಿ. ಆರ್. ಮಂಜುನಾಥ್‌ರೆಡ್ಡಿ ಮೇಯರ್ ಆಗಿ ಜೆಡಿಎಸ್ ಪಕ್ಷದ ವೃಷಭಾವತಿ ನಗರದಿಂದ ಗೆದ್ದಿದ್ದ ಅಭ್ಯರ್ಥಿ ಎಸ್.ಪಿ. ಹೇಮಲತಾ ಉಪಮೇಯರ್ ಆಗಿ 131 ಮತಗಳನ್ನು ಪಡೆದು ಆಯ್ಕೆಯಾದರು. ಇದಲ್ಲದೆ ಏಳು ಪಕ್ಷೇತರ ಸದಸ್ಯರುಗಳಿಗೆ ಒಂದೊಂದು ಸ್ಥಾಯಿ ಸಮಿತಿಯ ಅಧ್ಯಕ್ಷರಾಗುವ ಭಾಗ್ಯ ಲಭಿಸಿತು.

ಮೊದಲ ಬಾರಿ ಬಿಬಿಎಂಪಿ ಸದಸ್ಯೆಯಾಗಿ ಆಯ್ಕೆಗೊಂಡು ಉಪಮೇಯರ್ ಸ್ಥಾನವನ್ನು ಅಲಂಕರಿಸಿರುವ ಹೇಮಲತಾರವರು ಜನಿಸಿದ್ದು 12-9-1974 ರಂದು.ಅಲ್ಲದೆ ಶಾಸಕ ಗೋಪಾಲಯ್ಯರವರ ಧರ್ಮಪತ್ನಿ. ಇವರು ಕಂಪ್ಯೂಟರ್‌ನಲ್ಲಿ ಡಿಪ್ಲಮೋ ಮಾಡಿರುತ್ತಾರೆ. ಹಾಗೂ ಮಹಾಲಕ್ಷ್ಮೀ ಎಜುಕೇಷನ್ ಟ್ರಸ್ಟ್ ಮೂಲಕ ಸಮಾಜ ಸೇವೆಯನ್ನು ಮಾಡುತ್ತಿರುತ್ತಾರೆ. ಇವರಿಗೆ ಇಬ್ಬರು ಗಂಡುಮಕ್ಕಳು.

ಪತಿಯ ಜೊತೆಯಿಂದ ಕಲಿತಿರುವ ರಾಜಕೀಯ ಅನುಭವದಿಂದ ಆಡಳಿತ ನಡೆಸುವುದು ಗೊತ್ತಿದೆ. ಮೊದಲ ಬಾರಿಗೆ ಬಿಬಿಎಂಪಿ ಸದಸ್ಯೆಯಾದರೂ 20 ವರ್ಷಗಳಿಂದ ನಾಗರೀಕರೊಡನೆ ಒಡನಾಟವಿದೆ. ಬೆಂಗಳೂರಿನ ಅಭಿವೃದ್ಧಿಗಾಗಿ ಗುರಿಯಿಟ್ಟುಕೊಂಡು ಕೆಲಸ ಮಾಡುವುದಾಗಿ ತಿಳಿಸಿದರು. ಮಾತು ಮುಖ್ಯ ಮಾತಾಡಿದಂತೆ ನಡೆಯಲಿ ಎಂಬುದು ನಾಗರೀಕರ ಆಶಯ ಹಾಗೂ ಅವರಿಗೆ ದೇವರು ಎಲ್ಲ ಶಕ್ತಿಯನ್ನು ನೀಡಲಿ ಎಂದು ಮವಿ ಬಳಗ ಹಾರೈಸಿ ಅಭಿನಂದಿಸಿದೆ.

## ಧಾರವಾಡಕ್ಕೆ ಐಐಟಿ



ರಾಜ್ಯದಲ್ಲಿ ಐಐಟಿ ಸಂಸ್ಥೆ ಯನ್ನು ಒಲಿಸಿ ಕೊಳ್ಳಲು 3-4 ನಗರಗಳು ಪೈಪೋಟಿಯಲ್ಲಿದ್ದು ಅಂತಿ ಮವಾಗಿ ಧಾರವಾಡ ನಗರಕ್ಕೆ ಆ ಭಾಗ್ಯ ದೊರೆತಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿ ಅವರು ಕಡತಕ್ಕೆ ಸಹಿ ಹಾಕಿರುವುದಾಗಿ ತಿಳಿಸುತ್ತಾ ದೇಶದಲ್ಲಿಯೇ ಇದು ಒಂದು ಪ್ರತಿಷ್ಠಿತ ಐಐಟಿಯಾಗಲಿ ಎಂದು ಹೇಳಿದ್ದಾರೆ. ಇದನ್ನು ಅಭಿವೃದ್ಧಿಪಡಿಸುವುದು ನಮ್ಮೆಲ್ಲರ ಹೊಣೆ ಹಾಗೂ ಪಕ್ಷಾತೀತವಾಗಿ ಸರ್ಕಾರ ಮತ್ತು ಜನಪ್ರತಿನಿಧಿ ಸಹಕಾರ ಅಗತ್ಯ. ಈ ಸಂಸ್ಥೆಯನ್ನು ದೇಶದಲ್ಲೇ ಮಾದರಿ ಐಐಟಿಯಾಗಬೇಕೆಂದು ರಾಜ್ಯದ ಜನರ ಆಶಯವಾಗಿದೆ.

## ಬಣ್ಣವಿಲ್ಲದ ಗಣೇಶ ವಿಗ್ರಹ



ಸ್ವರ್ಣಗೌರಿ ಮತ್ತು ವರಸಿದ್ಧಿ ವಿನಾಯಕ ಹಬ್ಬ ವನ್ನು ಈ ಬಾರಿ ಜೇಡಿ ಮಣ್ಣಿನಿಂದ ಮಾಡಿರುವ ಬಣ್ಣ ವಿಲ್ಲದ ಗಣೇಶ ವಿಗ್ರಹವನ್ನು ತಂದು ಪೂಜಿಸಿ ವಿಸರ್ಜನೆ ಮಾಡುವಂತೆ ಮೈಸೂರು ಜಿಲ್ಲಾಧಿಕಾರಿ ಸಿ. ಶಿಖಾ ಅವರು ತಿಳಿಸಿದ್ದಾರೆ.

ನೀರಿನಲ್ಲಿ ಗಣೇಶನ ವಿಸರ್ಜಿಸುವ ಮೊದಲು ಕಾಗದದ ಅಲಂಕಾರ ವಸ್ತು, ಹೂವು, ವಸ್ತ್ರ ಇತ್ಯಾದಿಗಳನ್ನು ತೆಗೆಯಬೇಕು. ಅಲ್ಲದೆ ನೀರಿನ ತೊಟ್ಟಿಯಲ್ಲಿ ಗಣೇಶನ ವಿಗ್ರಹವನ್ನು ವಿಸರ್ಜಿಸಬೇಕೆಂದು ಹಾಗೆಯೇ ನಗರವನ್ನು ಪರಿಸರವನ್ನು ಸ್ವಚ್ಛವಾಗಿಡಬೇಕೆಂದು ಜಿಲ್ಲಾಧಿಕಾರಿಗಳು ನಾಗರೀಕರಲ್ಲಿ ಮನವಿ ಮಾಡಿದ್ದಾರೆ.

## ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆ

ಕೆಪಿಎಸ್‌ಸಿ ಸೆ.18 ರಿಂದ 22 ರವರೆಗೆ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯನ್ನು ನಡೆಸಲಿದೆ. ಅಭ್ಯರ್ಥಿಗಳ ಪ್ರವೇಶ ಪತ್ರವನ್ನು ಕೆಪಿಎಸ್‌ಸಿ ವೈಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳ ಬೇಕೆಂದು ಆಯೋಗ ತಿಳಿಸಿದೆ.

## ನೂರು ಕೋಟಿ ರೂ. ದೇಣಿಗೆ



ಕೇರಳ ರಾಜ್ಯದ ಕೊಲ್ಲಂನಲ್ಲಿರುವ ಮಾತಾ ಅಮೃತಾನಂದಮಯಿ ಆಶ್ರಮದಲ್ಲಿ ಮಾತೆಯು 100 ಕೋಟಿ ರೂ. ಬ್ಯಾಂಕ್ ಡ್ರಾಫ್ಟನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರದ ಮಹತ್ವಾಕಾಂಕ್ಷೆಯ 'ನಮಾಮಿ ಗಂಗಾ ಯೋಜನೆಗೆ ನೀಡಿರುತ್ತಾರೆ.

ಈ ಹಣವನ್ನು ಗಂಗಾನದಿಯ ತೀರದಲ್ಲಿರುವ ಗ್ರಾಮಗಳಲ್ಲಿನ ಶೌಚಾಲಯ ನಿರ್ಮಾಣ ಹಾಗೂ ಸ್ವಚ್ಛತಾ ಕಾರ್ಯಕ್ಕಾಗಿ ಉಪಯೋಗಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಜನರಿಗಾಗಿ ಕೆಲಸ ಎಂದರೆ ಇದು. ಮಾತೆಯ ಆನಂದದಿಂದ ನೂರು ಕೋಟಿ ರೂ. ದೇಣಿಗೆ ನೀಡಿರುವುದು ಸಂತಸದ ವಿಷಯ ಹಾಗೂ ಜನರೆಲ್ಲರೂ ಮೆಚ್ಚುವಂತದ್ದು. ನಿಜವಾಗಲೂ ಈ ಹಣ ದುರ್ಬಳಕೆಯಾಗದಂತೆ ಸರ್ಕಾರ ಬಹಳ ಕಾಳಜಿ ವಹಿಸಬೇಕೆಂದು ಸಾರ್ವಜನಿಕರ ಮನವಿ. ಮಾತಾ ಅಮೃತಾನಂದಮಯಿ ತಾಯಿಗೆ ಮ.ವಿ. ಬಳಗದಿಂದ ಅನಂತಾನಂತ ನಮಸ್ಕಾರಗಳು.

## ಸರ್ವರಿಗೂ ಹಬ್ಬದ ಶುಭಾಶಯಗಳು



ಶ್ರೀ ಮಂಗಳಗೌರಿ ಮತ್ತು ಗಣೇಶ ಹಬ್ಬದ ಪ್ರಯುಕ್ತ ನಮ್ಮ ಪತ್ರಿಕೆಯ ಓದುಗರೆಲ್ಲರಿಗೂ ಜಾಹೀರಾತುದಾರರಿಗೂ, ಹಿತೈಷಿಗಳಿಗೂ ತುಂಬು ಹೃದಯದ ಶುಭಾಶಯಗಳು

ಸರ್ವರಿಗೂ ಆಯುರಾರೋಗ್ಯ ಐಶ್ವರ್ಯವನ್ನು ಕರುಣಿಸಲಿ ಎಂದು ದೇವರಲ್ಲಿ ಮವಿ ಬಳಗ ಪ್ರಾರ್ಥಿಸುತ್ತದೆ.

ಸಂಪಾದಕರು, ಮೊ: 9243584444 /9379777793

## ಸೋನಿಯಾ ಮತ್ತೆ ಅಧಿನಾಯಕಿ



ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನವದೆಹಲಿಯಲ್ಲಿ ಇತ್ತೀಚಿಗೆ ನಡೆಯಿತು. ಈ ಸಭೆಯಲ್ಲಿ 7-8 ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ನಿರ್ಧಾರಕ್ಕೆ ಬರಲಾಯಿತು. ಅಲ್ಲದೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿಯವರನ್ನು ಇನ್ನೂ ಒಂದು ವರ್ಷದ ಅವಧಿಗೆ ಮುಂದುವರಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ರಾಜ್ಯ ಹಾಗೂ ರಾಷ್ಟ್ರದ ಎಲ್ಲಾ ವರ್ಗದ ಬಡ ಮಹಿಳೆಯರ ಬಗ್ಗೆ ಮಾಹಿತಿ ಪಡೆದು ಅವರಿಗೆ ನೇರವಾಗಿ ಸವಲತ್ತುಗಳು ದೊರೆಯಬೇಕು. ಅಲ್ಲದೆ ಮಹಿಳೆಯರ ಬೆನ್ನೆಲುಬಾಗಿರಬೇಕೆಂದುಕೊಳ್ಳುತ್ತಾ ಮಹತಾಯಿ ಚಾಮುಂಡೇಶ್ವರಿದೇವಿಯು ಒಳ್ಳೆಯಆರೋಗ್ಯವನ್ನು ನೀಡಲಿ ಎಂದು ಮ.ವಿ. ಬಳಗ ಶುಭವನ್ನು ಕೋರಿದೆ.

## ಜಯಲಲಿತಾರಿಂದ "ಅಮ್ಮ ಬೇಬಿ ಕೇರ್ ಕಿಟ್"



ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಆ ರಾಜ್ಯದ ಮಹಿಳೆಯರಿಗಾಗಿ "ಅಮ್ಮಾ ಬೇಬಿ ಕೇರ್ ಕಿಟ್ ಯೋಜನೆ" ಗೆ ಚಾಲನೆ ನೀಡಿದರು. ಈ ಕಿಟ್‌ನಲ್ಲಿ ಹದಿನಾರು ವಸ್ತುಗಳಿದ್ದು ಅದರ ಬೆಲೆ ಒಂದು ಸಾವಿರವಿರುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಜನಿಸಿದ ಮಕ್ಕಳಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ ಎಂಬ ಮಾಹಿತಿ ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಇಂತಹ ಕಾರ್ಯಗಳೇ ಸಾಮಾನ್ಯ ಜನರು ಅಪೇಕ್ಷೆ ಪಡುವುದು ಈ ಯೋಜನೆಯಿಂದ ಬಹಳಷ್ಟು ಜನರು ಅಪೇಕ್ಷೆ ಪಡುವುದು ಈ ಯೋಜನೆಯಿಂದ ಬಹಳಷ್ಟು ಜನ ಪ್ರಯೋಜನ ಪಡೆಯ ಲಿದ್ದಾರೆ. ಈ ಯೋಜನೆ ಯಶಸ್ವಿಯಾಗಲಿ. ಮುಖ್ಯಮಂತ್ರಿ ಜಯಲಲಿತಾರವರಿಗೊಂದು ಸಲಾಂ.

### ಬದುಕೇ ಹೀಗೆ !

**ಕತ್ತಲಿದ್ದಾಗ ಬೆಳಕಿಗಾಗಿ ಹೋರಾಟ....**
**ಬೆಳಕಿದ್ದಾಗ ಕತ್ತಲಿಗಾಗಿ ಹುಡುಕಾಟ..??**

### ನಡೆ - ನುಡಿ

ಪರರನ್ನು ಟೀಕಿಸುವ ಮುನ್ನ ನಿಮ್ಮನ್ನು ನೀವು ಅರಿತು ತಿದ್ದುಕೊಳ್ಳಿ. ಟೀಕೆಯು ಟೀಕೆ ಯಂತಿರದೆ ಸ್ನೇಹದ ನುಡಿಗಳಂತಿರಲಿ.

### ನೀವೇನಂತೀರಿ?

**ಒಗಟು**

"ಕೂತಲ್ಲೇ ಕೂತೌರೆ ಪಂಡಿತರು ಅಮಕ್‌ದರೇ ಪ್ರಾಣ ಹೋಗುತ್ತೇ ತಿರುಗಿಸಿ ದರೆ ಪ್ರಾಣ ಬರುತ್ತೆ"

**ಉತ್ತರ : ರೇಡಿಯೋ**

### ಭಾರತದಲ್ಲಿನ ಉದ್ಯಾನವನಗಳು

ಕರ್ನಾಟಕ ರಾಜ್ಯದಲ್ಲಿ ಐದು ಉದ್ಯಾನವನಗಳಿವೆ. ಅವುಗಳು ಬನ್ನೇರುಘಟ್ಟ, ರಾಷ್ಟ್ರೀಯ ಉದ್ಯಾನವನ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ಬಂಡೀಪುರ ರಾಷ್ಟ್ರೀಯ ಉದ್ಯಾನವನ, ರಂಗನತಿಟ್ಟು ಪಕ್ಷಿಧಾಮ ಹಾಗೂ ಘಟಪ್ರಭಾ ಪಕ್ಷಿಧಾಮ.

### ಪ್ರಶ್ನೋತ್ತರ

ಪ್ರ:ಭಾರತದ ಅತ್ಯಂತ ಎತ್ತರವಾದ ಜಲಪಾತ ಯಾವುದು ?

ಜೋಗ ಜಲಪಾತ (ಕರ್ನಾಟಕ)

### ಜನರೇಷನ್ ಗ್ಯಾಪ್

ಕಳೆದ ಎರಡು ಸಂಚಿಕೆಗಳಲ್ಲಿ ಜನರೇಷನ್ ಗ್ಯಾಪ್ ಬಗ್ಗೆ ಸಂಪೂರ್ಣ ವಿವರಣೆಯನ್ನು ಪಡೆದುಕೊಂಡಿರಿ. ಈಗ ಜನರೇಷನ್ ಗ್ಯಾಪ್ ಹೇಗಿದೆ ಎಂಬುದರ ಸಂಕ್ಷಿಪ್ತ ಚಿತ್ರಣವನ್ನು ನಮ್ಮ ಓದುಗರಿಗಾಗಿ ನೀಡಲಾಗಿದೆ.

ಹಿಂದಿನ ತಲೆಮಾರು:

1.ಕಷ್ಟಕರವಾದ ಜೀವನದಲ್ಲಿ ಬಂದವರು

2.ಸಾಂಪ್ರದಾಯಿಕತೆಯನ್ನು, ಪರಂಪರೆ ಯನ್ನು ಮೆಚ್ಚಿಕೊಂಡು ಅದರಂತೆ ಪಾಲಿಸು ತ್ತಿರುವವರು

3. ಜೀವನದಲ್ಲಿ ತಾವು ಸಹಿಸಿದ ಕಷ್ಟ - ನಷ್ಟಗಳಿಂದ ಅನುಭವ ಪಡೆದು ಪ್ರಬುದ್ಧ ಮನಃಸ್ಥಿತಿಯನ್ನು ಪಡೆದವರು.

....ಮುಂದುವರಿಯುವುದು.

### ಹೇಗಿರಬೇಕು?

ತನ್ನ ಅಗತ್ಯ ಮತ್ತು ಇತರರ ಅಗತ್ಯದ ಅನಿವಾರ್ಯ ಸಂದರ್ಭದಲ್ಲಿ ಇತರರ ಅಗತ್ಯವನ್ನು ಮೊದಲು ಗಮನಿಸಬೇಕು.

### ಸ್ವಲ್ಪ ನಗ್ತೀರಾ ಪ್ಲೀಸ್....?

ಗಂಡಸು ಹಾಗೂ ಹೆಂಗಸಿನ ಪ್ರಕಾರ ವೈಫ್ ಅಂದರೆ ಏನು ?

ಗಂಡಸಿನ ಪ್ರಕಾರ WIFE ಎಂದರೆ without information fighting everytime. ಅದೇ ಹೆಂಗಸಿನ ಪ್ರಕಾರ WIFE ಎಂದರೆ With IDOIT- for ever.

## ಎಚ್‌ಎಂಟಿಯಲ್ಲಿ ಮ್ಯಾನೇಜರ್ ಹುದ್ದೆಗಳು

ಬೆಂಗಳೂರಿನಲ್ಲಿರುವ ಎಚ್‌ಎಂಟಿಯಲ್ಲಿ ಮ್ಯಾನೇಜರ್ 21ಹುದ್ದೆಗಳು ಖಾಲಿಯಿದ್ದು ಅರ್ಜಿ ಸಲ್ಲಿಸಲು 15-9-15 ರಂದು ಕೊನೆಯ ದಿವಸ. ವಿದ್ಯಾರ್ಹತೆ, ವಯಸ್ಸು, ಅರ್ಜಿ ಶುಲ್ಕ ಇತ್ಯಾದಿಗಳ ಮಾಹಿತಿಗಳನ್ನು www.hmtindia.com ವೆಬ್‌ಸೈಟ್‌ನಲ್ಲಿ ಪಡೆಯಬಹುದು.

## ಎಚ್‌ಎಎಲ್ ನಲ್ಲಿ ವಿವಿಧ ಹುದ್ದೆಗಳು

ಎಂಜಿನಿಯರ್ ಸಹಾಯಕ ಸಂಪನ್ಮೂಲ ಅಧಿಕಾರಿ, ಡಿಪ್ಲಮೋ, ಟ್ರೈನಿ, ಬೆರಳಚ್ಚುಗಾರರು ಒಟ್ಟು 36 ಹುದ್ದೆಗಳು ಅಂಗವಿಕಲ ಅಭ್ಯರ್ಥಿಗಳಿಗಾಗಿ ಖಾಲಿಯಿದ್ದು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು 15-10-15 ರಂದು ಕೊನೆಯ ದಿನ. ಹೆಚ್ಚಿನ ವಿವರಗಳನ್ನು www.hal-india.com ವೆಬ್‌ಸೈಟ್‌ನಲ್ಲಿ ಪಡೆಯಬಹುದು.

## ಬಿಇಎಲ್ ನಲ್ಲಿ ಇಂಜಿನಿಯರ್ ಹುದ್ದೆಗಳು

ಎಲೆಕ್ಟ್ರಾನಿಕ್ಸ್ ಅಥವಾ ಮೆಕ್ಯಾನಿಕಲ್‌ನಲ್ಲಿ ಡಿಪ್ಲಮೋ / ಬಿ.ಇ./ಬಿ.ಟೆಕ್ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿಸಲ್ಲಿಸಲು ಕೊನೆಯ ದಿವಸ 19-9-15. ಹೆಚ್ಚಿನ ಮಾಹಿತಿಯನ್ನು www.bel.india.com ವೆಬ್‌ಸೈಟ್‌ನಲ್ಲಿ ಪಡೆಯಬಹುದು.

## ಹೀಗಿದ್ದರೆ ಎಷ್ಟು ಚೆಂದ !!!ನಿಮಗಿಲ್ಲವೆ ಆಸೆ !!!

**ಹಾಗಿದ್ದರೆ ನಿಮ್ಮಲ್ಲಿರುವ ಫೋಟೋ ಕಳುಹಿಸಿಕೊಟ್ಟಲ್ಲಿ ಪ್ರಕಟಿಸಲಾಗುವುದು.**





## ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ವಿಕಲಚೇತನ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ/ ಸಂಸ್ಥೆ / ವಿಶೇಷ ಶಾಲೆಗಳನ್ನು 15 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ / ಸಲ್ಲಿಸುತ್ತಿರುವ ಶಿಕ್ಷಕರಿಗೆ 2015-16ನೇ ಸಾಲಿಗಾಗಿ ರಾಜ್ಯ ಪ್ರಶಸ್ತಿ ನೀಡಲು ಅರ್ಜಿಯನ್ನು ಕರೆಯಲಾಗಿದೆ. ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸೆಪ್ಟೆಂಬರ್ 25 ರೊಳಗೆ ಸಲ್ಲಿಸಬೇಕೆಂದು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ ಅಥವಾ www.welfareofdisabled.kar.nic.in ವೈಬ್‌ಸೈಟ್‌ನ್ನು ಸಂಪರ್ಕಿಸಬಹುದು.

## ಅರ್ಜಿ ಆಹ್ವಾನ

ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ 2015-16ಸಾಲಿಗೆ ಕಾರ್ಮಿಕರ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಪದವಿ, ಸ್ನಾತಕೋತ್ತರ ಪದವಿ,ಇಂಜಿನಿಯರಿಂಗ್, ವೈದ್ಯಕೀಯ ವ್ಯಾಸಂಗ ವಿದ್ಯಾರ್ಥಿಗಳು ಸೆಪ್ಟೆಂಬರ್ 30 ರೊಳಗೆ ಅರ್ಜಿಯನ್ನು ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಿದೆ. ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು www.klwb.kar.com ವೈಬ್‌ಸೈಟನಲ್ಲಿ ಪಡೆಯುವುದು.

## 21 ನೇ ಸರ್ವಸದಸ್ಯರ ಸಭೆ

ಇದೇ ಮಾಹೆಯ ದಿನಾಂಕ 20 ರಂದು ಭಾನುವಾರ ಬೆಳಗ್ಗೆ 10- 30 ಗಂಟೆಗೆ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, ಚಾಮರಾಜ ಜೋಡಿ ರಸ್ತೆ, ಮೈಸೂರು ಇದರ 2014-15 ನೇ ಸಾಲಿನ 21ನೇ ವರ್ಷದ ಸರ್ವ ಸದಸ್ಯರ ಸಭೆಯನ್ನು ಮೈಸೂರಿನ ಚಾಮರಾಜಜೋಡಿ ರಸ್ತೆಯಲ್ಲಿರುವ ಸಹಕಾರ ಭವನ ಅವರಣದಲ್ಲಿ ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆಯನ್ನು ಡಾ. ಎಂ.ವಿ. ಬೃಹದಂಬ, ಬ್ಯಾಂಕಿನ ಅಧ್ಯಕ್ಷತೆ ವಹಿಸಲಿದ್ದಾರೆ.

ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿ ಹಾಗೂ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕೆಂದೂ ಹಾಗೆಯೇ ಹಾಜರಾತಿ ಪುಸ್ತಕದಲ್ಲಿ ಸಹಿಯನ್ನು ಮಾಡಬೇಕೆಂದು ಸೂಚಿಸಿದೆ. ಪ್ರತಿಭಾ ಪುರಸ್ಕಾರಕ್ಕೆ ಸಂಬಂಧಿಸಿದಂತೆ ಪೋಷಕರು ಸಕಾಲದಲ್ಲಿ ಮಾಹಿತಿಯನ್ನು ನೀಡಬೇಕೆಂದೂ ಅಲ್ಲದೆ ಈ ಸೌಲಭ್ಯದ ಸದವಕಾಶವನ್ನು ಪಡೆದುಕೊಳ್ಳಬೇಕೆಂದು ಬ್ಯಾಂಕಿನ ವ್ಯವಸ್ಥಾಪಕರಾದ ಎನ್. ಸುಮಾರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಈ ಪತ್ರಿಕೆಯನ್ನು ಓದಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಪತ್ರಿಕೆಯನ್ನು ಬೆಳೆಸಿ.**

ಈ ಜಾಗ ಓದುಗರಿಗಾಗಿ ಸ್ವಂತ ನಗೆಹನಿ, ಬರಹ, ಚುಟುಕು, ಕವನ ಇತ್ಯಾದಿಗಳನ್ನು ಪ್ರಕಟಿಸಲು ಕಳುಹಿಸಿಕೊಡಿ. ಪ್ರಕಟಿಸಲು ಕೆಲವು ಮಾನದಂಡಗಳನ್ನು ಅಳವಡಿಸ ಲಾಗಿದೆ. ಪ್ರಕಟಿಸುವ ವಿಚಾರ ಪತ್ರಿಕೆಯ ಮಂಡಳಿಕೆ ಸೇರಿದ್ದಾಗಿರುತ್ತದೆ.

# ನೇಮಕಾತಿ ಅಂಕಣ

## ಗ್ರಾಮ ಲೆಕ್ಕಿಗರ ಹುದ್ದೆ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆಗೆ ದ.ಕ. ಜಿಲ್ಲೆಯ ತಾಲ್ಲೂಕುಗಳಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 23.09.2015 ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ http://dk.nic.in ಒಟ್ಟು 40 ಹುದ್ದೆಗಳಲ್ಲಿ 14 ಹುದ್ದೆಗಳು ಮಹಿಳೆಯರಿಗಾಗಿಯೇ ಇರುತ್ತದೆ.

## ಅರ್ಜಿ ಆಹ್ವಾನ

ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಿರುದ್ಯೋಗಿ ಅಭ್ಯರ್ಥಿಗಳಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಉಚಿತವಾಗಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ.

ಈ ತರಬೇತಿ ಪಡೆಯಲು ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ/ಡಿಪ್ಲಮೊ/ಬಿ.ಇ. ವಿದ್ಯಾರ್ಹತೆ ಹೊಂದಿದವರಾಗಿರುವ ನಿರುದ್ಯೋಗಿಗಳು ಅರ್ಜಿ ಸಲ್ಲಿಸಬಹುದು. ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕೆಆರ್‌ಎಸ್. ರಸ್ತೆಯಲ್ಲಿರುವ ಕಛೇರಿಯಲ್ಲಿ ಅಥವಾ ಮೊಬೈಲ್ : 9141629598 ನ್ನು ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಕೆಎಸ್‌ಆರ್‌ಪಿಯಲ್ಲಿ ಉದ್ಯೋಗ

ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ಖಾಲಿ ಇರುವ ವಿಶೇಷ ರಿಸರ್ವ್ ಪೋಲೀಸ್ ಮಹಿಳಾ ಕಾನ್ಸ್ ಸ್ಟೇಬಲ್ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದೆ. ಮಹಿಳೆ ಯರಿಗಾಗಿ 91 ಹುದ್ದೆಗಳು ಇದ್ದು ಅರ್ಜಿ ಯನ್ನು ಸಲ್ಲಿಸಲು ಅಕ್ಟೋಬರ್ 6 ರಂದು ಕೊನೆಯ ದಿವಸವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ನೋಡುವುದು.

## ಆರ್‌ಆರ್‌ಬಿಯಲ್ಲಿ ಅರ್ಜಿ ಆಹ್ವಾನ

ಕ್ಲರ್ಕ್ ಕಂ ಟೈಪಿಸ್ಟ್ ಕಮರ್ಷಿಯಲ್ ಕ್ಲರ್ಕ್, ಟ್ರೈನ್ಸ್ ಕ್ಲರ್ಕ್ ಹಾಗೂ ಟಿಕೇಟ್ ಎಗ್ಸಾಮಿನರ್ ಹುದ್ದೆಗಳಿಗಾಗಿ ಅಂಗವಿಕಲ ಅಭ್ಯರ್ಥಿಗಳಿಂದ ರೈಲ್ವೆ ನೇಮಕಾತಿ ಮಂಡಳಿಯು ಅರ್ಜಿಯನ್ನು ಕರೆಯಲಾಗಿದೆ. ವಿದ್ಯಾರ್ಹತೆ ಪಿಯುಸಿ ಜೊತೆಗೆ ಟೈಪಿಂಗ್ ಜ್ಞಾನವಿರಬೇಕು. ಅರ್ಜಿಯನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು.

ಬೆಂಗಳೂರಿನಲ್ಲಿ 68 ಹುದ್ದೆಗಳಿಗೆ ನೇಮಕಾತಿ ನಡೆಯಲಿದ್ದು ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 21 ಕೊನೆಯ ದಿನ. ಹೆಚ್ಚಿನ ಮಾಹಿತಿ ಗಳನ್ನು www.rrbnne.gov.in ನಲ್ಲಿ ಪಡೆಯುವುದು.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

## ಹಂಗಳದಲ್ಲಿ ವಿದೇಶಿ ತಂಡ

ಚಾಮರಾಜಗರ ಜಿಲ್ಲೆ ಹಂಗಳ ಗ್ರಾಮ ಪಂಚಾಯಿತಿಗೆ ಮಹಾತ್ಮ ಗಾಂಧಿ ಪುರಸ್ಕಾರ ದೊರೆತಿರುವುದರಿಂದ ಅದರ ಅಭಿವೃದ್ಧಿ ಕಾರ್ಯಗಳನ್ನು ಅಧ್ಯಯನ ನಡೆಸಲು ವಿದೇಶಿ ತಂಡ ಆಗಮಿಸಿದೆ.

ವಿವಿಧ ಇಲಾಖೆಗಳಿಂದ ಅವಶ್ಯಕ ಮಾಹಿತಿ ಪಡೆದುಕೊಂಡು ಖುದ್ದಾಗಿ ಗ್ರಾಮದಲ್ಲಿ ಪರಿಶೀಲನೆ ನಡೆಸಿದ ವಿದೇಶಿ ಅಧಿಕಾರಿಗಳು ಅಭಿವೃದ್ಧಿ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರಶಂಸಿಸಿದರು. ಗ್ರಾ. ಪಂ. ಅಧ್ಯಕ್ಷೆ ಗೌರಮ್ಮ ಹಾಗೂ ಸದಸ್ಯರುಗಳ ಒಗ್ಗಟ್ಟೆ ಇದಕ್ಕೆ ಕಾರಣ. ಗ್ರಾಮದಲ್ಲಿ ಜನರು ಹೆಚ್ಚು ಲವಲವಿಕೆಯಿಂದ ಕೂಡಿರುವುದು ಕಂಡು ಬಂದಿತೆಂದು ಅಧ್ಯಯನ ತಂಡ ತಿಳಿಸಿದೆ.

## ಸಮಾಲೋಚನ ಸಮಿತಿ ಸಭೆ

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಗೆ ಹೊಸ ಶಿಕ್ಷಣ ನೀತಿ ರೂಪಿಸಿಸಲು ಸಲಹೆಗಳನ್ನು ಕೊಡಬೇಕಾದ ಪ್ರಯುಕ್ತ ಕಳೆದವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಮಾಲೋಚನೆ ಸಮಿತಿಯ ಸಭೆಯನ್ನು ಏರ್ಪಡಿಸಲಾಗಿತ್ತು.

ಜಿಲ್ಲಾ ಪಂಚಾಯತಿ ಅಧ್ಯಕ್ಷತೆ ಡಾ . ಪುಷ್ಪಲತಾ ಅಮರನಾಥ್‌ರವರು ಕಲಿಕೆ ಎಂಬುದು ಮಕ್ಕಳಲ್ಲಿ ನಿರಂತರವಾಗಿ ನಡೆಯಬೇಕು. ಪ್ರತಿದಿನ ಮಕ್ಕಳಿಗೆ ಹೊಸ ಕಲಿಕಾ ವಸ್ತು ನೀಡಿ ಅದರ ಶಿಕ್ಷಣ ನೀಡಬೇಕಾದರೆ ಮೊದಲು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರದಂತೆ ನೋಡಿಕೊಳ್ಳಬೇಕೆಂದು ಅಧ್ಯಕ್ಷರು ತಿಳಿಸಿದರು.

## ಡಾ. ಪುಷ್ಪಲತಾಗೆ ವರ್ಗಾವಣೆ

ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ಉಪವಿಭಾಗ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದ ಡಾ. ಪುಷ್ಪಲತಾರವರನ್ನು ಸರ್ಕಾರಿ ಆಸ್ಪತ್ರೆ ಬಂಟ್ವಾಳಕ್ಕೆ ವರ್ಗಾವಣೆಯನ್ನು ಸರ್ಕಾರ ಮಾಡಿದೆ. ಇವರ ಸ್ಥಾನಕ್ಕೆ ಯಾರನ್ನೂ ವರ್ಗಾಯಿಸಿಲ್ಲ ಹಾಗೂ ನಿಯೋಜಿಸಿರುವುದಿಲ್ಲ. ಉಪವಿಭಾಗ ಆಸ್ಪತ್ರೆಯಲ್ಲಿ ಒಂಭತ್ತು ವೈದ್ಯರ ಹುದ್ದೆಗಳು ಈಗಾಗಲೇ ಖಾಲಿಯಿದ್ದು ವೈದ್ಯರ ಕೊರತೆ ಎದುರಿಸುತ್ತಿದೆ. ಡಾ. ಪುಷ್ಪಲತಾರವರ ಸ್ಥಳಕ್ಕೆ ಕೂಡಲೇ ಬೇರೊಬ್ಬ ವೈದ್ಯರನ್ನು ನೇಮಿಸಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸ್ಥಳೀಯರು ಸರ್ಕಾರವನ್ನು ಕೋರಿದ್ದಾರೆ.

## ಸೋನಾಕ್ಷಿಯ ಬಾಲಿವುಡ್ ಪಯಣ



'ದಬಂಗ್' ಸಿನಿಮಾ ಬಿಡುಗಡೆಯಾಗಿ ಐದು ವರ್ಷ. ಈ ಸಿನಿಮಾದ ಮೂಲಕ ಸೋನಾಕ್ಷಿ ನಟನಾ ಬದುಕಿಗೆ ಕಾಲಿಟ್ಟು ಐದು ವರ್ಷಗಳು ಅಲ್ಲದೆ ಈವರೆಗೆ 13 ಚಿತ್ರದ ನಾಯಕಿಯಾಗಿ ಗುರುತಿಸಿಕೊಂಡು ಬಾಲಿವುಡ್‌ನಲ್ಲಿ ಬಹುಬೇಡಿಕೆಯ ನಟಿಯಾಗಿ ಯಶಸ್ಸು ಗಳಿಸಿಕೊಂಡಿದ್ದಾರೆ.ಇದಕ್ಕೆಲ್ಲಾ ಕಾರಣ ಅಭಿಮಾನಿಗಳೇ ಎಂದು ಅವರು ಟ್ವಿಟರ್‌ನಲ್ಲಿ ಧನ್ಯವಾದವನ್ನು ಅರ್ಪಿಸಿದ್ದಾರೆ.

ಸೋನಾಕ್ಷಿಗೆ ಎಲ್ಲಾ ಯಶಸ್ಸು ಹಾಗೂ ಆಸೆಗಳು ಈಡೇರಲಿ ಎಂಬುದೇ ಅಭಿಮಾನಿಗಳ ಆಶಯ. ನಿಮ್ಮ ಬಾಲಿವುಡ್ ಪಯಣ ಇನ್ನೂ ಪ್ರಜ್ವಲಿಸಲಿ ಎಂದು ಮವಿ ವೃಂದದಿಂದ ಶುಭವನ್ನು ಹಾರೈಸಿದೆ.

## ಕೊಡಗು ಸಹಕಾರ ಸಂಘದ ವಾರ್ಷಿಕ ಮಹಾಸಭೆ

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಸಹಕಾರ ಸಂಘದ 2014-15ರ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ 24 ರಂದು ಸಂಘದ ಆವರಣದಲ್ಲಿ ನಡೆಯಲಿದೆ. ಸದಸ್ಯರುಗಳು ಮಹಾಸಭೆಗೆ ಹಾಜರಾಗಬೇಕೆಂದು ಕೋರಿ ಅಮೂಲ್ಯ ಸೂಚನೆ ಮತ್ತು ಸಲಹೆಗಳನ್ನು ನೀಡಬೇಕೆಂದು ಸಂಘ ಕೋರಿದೆ.

ಮಹಾಸಭೆಯು ಬೆಳಿಗ್ಗೆ 10-30ಕ್ಕೆ ಆರಂಭಗೊಳ್ಳಲಿದ್ದು ಈ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷೆ ಎ.ಸಿ. ನಂಜಮ್ಮ ಅವರು ವಹಿಸಲಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಸಾಕ್ಷರತಾ ದಿನಾಚರಣೆ

ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿ ಸ್ವಯಂ ಸೇವಕರು ಹಾಗೂ ಕಲಿಕಾರ್ಥಿಗಳಿಂದ ಸಾಕ್ಷರ ಮೆರವಣಿಗೆ ಮಾಡಲಾಯಿತು. ಅನಂತರ ಗ್ರಾ. ಪಂ. ಅಧ್ಯಕ್ಷೆ ಶಾಂತಮ್ಮ ಧ್ವಜಾರೋಹಣವನ್ನು ನೆರವೇರಿಸಿದರು. ಗ್ರಾ.ಪಂ. ಉಪಾಧ್ಯಕ್ಷ ಸದಸ್ಯರು ಉಪಪ್ರಾಂಶುಪಾಲರು ಪಿಡಿಓ ಇತರರು ಹಾಜರಿದ್ದರು.

**ಯೋಚಿಸಿ ನೋಡಿ "ವೇದ ಸುಳ್ಳಾದರೂ ಗಾದೆ ಸುಳ್ಳಾಗದು"**

-ಯಾಕೆ ಅಂದ್ರೆ, ವೇದ ಪಂಡಿತರ ಸೃಷ್ಟಿ, ಗಾದೆ ಪಾಮರರ ಸೃಷ್ಟಿ, ಅದು ಸ್ವಾನುಭಾವದ ಸಿಂಧು, ಇದು ಲೋಕಾನುಭವದ ಬಿಂದು !


## ಮಹಿಳಾ ವಿಶೇಷ ಕನ್ನಡ ವಾರಪತ್ರಿಕೆ

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

**ಚಂದಾ ಕೂಪನ್**

ಮಾನ್ಯರೇ,

ಮಹಿಳಾ ವಿಶೇಷ ಪತ್ರಿಕೆಯ 1ವರ್ಷ/ 2 ವರ್ಷ/ 3 ವರ್ಷಯ / 5 ವರ್ಷ/ ಅಜೀವ / ಪೋಷಕ / ಮಹಾ ಪೋಷಕ ಚಂದಾದಾರರಾಗಲು ರೂ................................ ಬ್ಯಾಂಕ್ ಡಿಡಿ ಚೆಕ್ / ಎಂ. ಓ. ಕಳುಹಿಸುತ್ತಿದ್ದೇನೆ. ನನಗೆ ಪ್ರತಿವಾರವೂ ಪತ್ರಿಕೆಯನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

ದಿನಾಂಕ : ಸಹಿ :

**ವಿವರಗಳು**

ಹೆಸರು :

ಹುಟ್ಟಿದ ದಿನಾಂಕ :

ವಿದ್ಯಾರ್ಹತೆ :

ವೃತ್ತಿ :

ಮೊ. ಸಂಖ್ಯೆ :

ಇ- ಮೇಲ್ :

ವಿಳಾಸ :

ಪಿನ್‌ಕೋಡ್ :

ಲಗತ್ತಿಸಿರುವ ಬ್ಯಾಂಕ್ ಚೆಕ್/ ಡಿಡಿ ಸಂಖ್ಯೆ..............................................
.............................................................. ದಿನಾಂಕ ..........................

ಮಹಿಳಾ ವಿಶೇಷ ಹೆಸರಿನಲ್ಲಿ ಕಳುಹಿಸಿದೆ. ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಿಕೊಡಿ.

**ಚಂದಾ ವಿವರ**

ವಾರ್ಷಿಕ ಪತ್ರಿಕೆಗೆ ಚಂದಾ, ಅಂಚೆ ವೆಚ್ಚಕ್ಕಾಗಿ ಹಾಗೂ ಪತ್ರಿಕೆಯ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಈ ಕೆಳಕಂಡಂತೆ ಚಂದಾ ಹಣವನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| **1 ವರ್ಷಕ್ಕೆ** | ...... | ರೂ. | **501/-** |
| **2 ವರ್ಷಕ್ಕೆ** | ...... | ರೂ. | **1,001/-** |
| **3 ವರ್ಷಕ್ಕೆ** | ...... | ರೂ. | **1,501/-** |
| **5 ವರ್ಷಕ್ಕೆ** | ...... | ರೂ. | **2,501/-** |
| **ಆ ಜೀವ ಸದಸ್ಯತ್ವಕ್ಕೆ** | ...... | ರೂ. | **5,001/-** |
| **ಪೋಷಕ ಸದಸ್ಯತ್ವಕ್ಕೆ** | ...... | ರೂ. | **10,001/-** |
| **ಮಹಾಪೋಷಕ ಸದಸ್ಯತ್ವಕ್ಕೆ** | ..... | ರೂ. | **25,001/-** |

ಪ್ರತಿಮನೆಯಲ್ಲಿ ತಾಯಿ, ಹೆಂಡತಿ, ಹೆಣ್ಣು ಮಕ್ಕಳು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಎಲ್ಲರೂ ಅಥವಾ ಯಾರಾದರೂ ಇದ್ದೇ ಇರುತ್ತಾರೆ. ನಿಮಗೆ ಇಷ್ಟ ಬಂದವರ ಹೆಸರಲ್ಲಿ ಪತ್ರಿಕೆ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದೆ. ಈ ಪತ್ರಿಕೆಯಿಂದ ಒಳ್ಳೆಯ ಮಾಹಿತಿಗಳನ್ನು ಜೀವನದಲ್ಲಿ ಟೆನ್ಷನ್ ಫ್ರೀಯಾಗಿರಲು ವಿಷಯಗಳನ್ನು ನೀಡುವುದೇ ಪತ್ರಿಕೆಯ ಉದ್ದೇಶವಾಗಿದೆ. ಯೋಚಿಸಿ ಒಂದು ಒಳ್ಳೆಯ ನಿರ್ಧಾರಕ್ಕೆ ಬನ್ನಿ. ನಿಮ್ಮ ಬಂಧು, ಬಳಗ, ಸ್ನೇಹಿತರಿಗೆ ತಿಳಿಸಿ. ನೀವು ಹಾಗೂ ಅವರನ್ನು ಚಂದಾದಾರರನ್ನಾಗಿ ಮಾಡಬೇಕೆಂದು ವಿನಂತಿಸಿದೆ.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

**ಚಂದಾ ಕಳುಹಿಸಬೇಕಾದ ವಿಳಾಸ :**

ಸಂಪಾದಕರು, **ಮಹಿಳಾ ವಿಶೇಷ**

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

## ಜಿಲ್ಲಾಮಟ್ಟದ ಹ್ಯಾಂಡ್‌ಬಾಲ್ ಪಂದ್ಯ

ಮೈಸೂರಿನಲ್ಲಿರುವ ವಿದ್ಯಾವಿಕಾಸ ಕಾಲೇಜಿನಲ್ಲಿ ನಡೆದ ಹ್ಯಾಂಡ್‌ಬಾಲ್ ಪಂದ್ಯದಲ್ಲಿ ಮರಿಮಲ್ಲಪ್ಪ ಕಾಲೇಜು ಬಾಲಕಿಯರ ತಂಡ ಪ್ರಥಮ ಸ್ಥಾನ ಗಳಿಸಿದೆ. ಮಹಿಳೆಯರ ಫೈನಲ್ ಪಂದ್ಯದಲ್ಲಿ ಮರಿಮಲ್ಲಪ್ಪ ಕಾಲೇಜು ತಂಡ 7-2 ಗೋಲುಗಳಿಂದ ಜೆಎಸ್‌ಎಸ್ ಕಾಲೇಜು ವಿರುದ್ಧ ಜಯಗಳಿಸಿತು.

ವಿದ್ಯಾವಿಕಾಸ್ ಪದವಿ ಪೂರ್ವ ಕಾಲೇಜು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜು ಹ್ಯಾಂಡ್ ಬಾಲ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿತ್ತು. ಪ್ರಥಮ ಸ್ಥಾನ ಗಳಿಸಿದ ಮರಿಮಲ್ಲಪ್ಪ ಮಹಿಳಾ ಕಾಲೇಜು ತಂಡಕ್ಕೆ ಕಾಲೇಜಿನ ಆಡಳಿತ ವರ್ಗ ಹಾಗೂ ವಿದ್ಯಾರ್ಥಿಗಳು ಅಭಿನಂದನೆಯನ್ನು ಸಲ್ಲಿಸಿದರು.

## ಭಾರತ 'ಎ' ತಂಡಕ್ಕೆ ಜಯ

ಇತ್ತೀಚೆಗೆ ನಡೆದ ಪಿಟಿಟಿಎಫ್ ಜೂನಿಯರ್ ಸರ್ಕೀಟ್ ಟೇಬಲ್ ಟೆನ್ನಿಸ್ ಟೂರ್ನಿಯಲ್ಲಿ ಕರ್ನಾಟಕದ ಅರ್ಚನಾ ಕಾಮತ್ ಹಾಗೂ ಸೃಷ್ಟಿ ಹಳೆಯಂಗಡಿ ಒಳಗೊಂಡ ಭಾರತ 'ಎ' ತಂಡ ಚಿನ್ನದ ಪದಕವನ್ನು ಗೆದ್ದುಕೊಂಡಿತು. ಟೂರ್ನಿಯ ಫೈನಲ್ ಪಂದ್ಯವನ್ನು ಪ್ರಿಯಾಂಕ ಫಾರೀಕ್ ಹಾಗೂ ಸೌಂದರ್ಯ ಪಾಠಕ್ ಒಳಗೊಂಡು ಆಟವಾದಿ ಭಾರತ 'ಇ'ತಂಡ ಸೋತು ಅನುಭವಿಸಿತು.

## ಕಾಮನ್‌ವೆಲ್ತ್ ಯೂತ್ ಗ್ರೋವರ್ಸ್

ಐದನೇ ಕಾಮನ್‌ವೆಲ್ತ್ ಯುವ ಕ್ರೀಡಾ ಕೂಟವು ನವದೆಹಲಿಯಲ್ಲಿ ನಡೆಯುತ್ತಿದ್ದು ಬಾಲಕಿಯಾದ 40 ಮೀ. ಓಟದಲ್ಲಿ ಜಿಸ್ನಾ ಮಾಥ್ಯೂ ಅವರು 53-14 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬೆಳ್ಳಿಯ ಪದಕವನ್ನು ಜಯಿಸಿದರು.

## ಜಂಪಾ ಲಾಹಿರಿಗೆ ಪ್ರಶಸ್ತಿ

ಅಮೇರಿಕದ ಅಧ್ಯಕ್ಷ ಬರಾಕ್ ಒಬಾಮರವರು ಕಳೆದ ವಾದ ವೈಟ್‌ಹೌಸ್‌ನಲ್ಲಿ ಭಾರತೀಯ ಮೂಲಕ ಲೇಖಕಿ ಜಂಪಾ ಲಾಹಿರಿಗೆ "ರಾಷ್ಟ್ರೀಯ ಮಾನವತಾ ಪ್ರಶಸ್ತಿ"ನೀಡಿ ಗೌರವಿಸಿದರು. ಇವರ ಕೃತಿಗಳಲ್ಲಿ ಭಾರತ ಮತ್ತು ಅಮೇರಿಕದ ಚಿತ್ರಣವಿದ್ದು ಓದುಗರ ಮನಸ್ಸನ್ನು ಸೂರೆಗೊಂಡಿದೆ ಹಾಗೂ ಸರಳ ಭಾಷೆಯಾಗಿದ್ದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದೆ.


*ಗೌರಿ ಗಣೇಶ ಹಬ್ಬದ ಶುಭಾಶಯಗಳು ಶುಭ ಕೋರುವವರು*

**ಸತೀಶ್ ಸ್ಟೋರ್ಸ್**

ಡಿ.ವಿ.ಜಿ. ರಸ್ತೆ , ಗಾಂಧಿ ಬಜಾರ್, ಬೆಂಗಳೂರು

*ರೆಡಿಮೇಡ್ ಪೂಜಾ ಸಾಮಗ್ರಿ ಕಿಟ್, ರೆಡಿಮೇಡ್ ಹಣ್ಣಿನ ಕಿಟ್*
*ರೆಡಿಮೇಡ್ ತಿಂಡಿಗಳ ಕಿಟ್ ಮಾರಾಟಕ್ಕೆ ಸಿದ್ಧ ವಿದೆ.*

ರೂ. **1,900** ರಿಂದ ರೂ. **2,950**

ಆಸಕ್ತರು ಸಂಪರ್ಕಿಸಿ

**ಕುಮಾರ್**, ಮಾಲೀಕರು,
ಮೊಬೈಲ್ ಸಂಖ್ಯೆ :9845515939,
ವೆಬ್‌ಸೈಟ್ www. satishstoresonline.com



# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**
**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ, ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :** ಸಂಖ್ಯೆ 734, ನ್ಯೂ ಮಸೀದಿ ರಸ್ತೆ, ಮೆಟ್ರೋ ಸ್ಟೇಷನ್ ಹತ್ತಿರ, ಮೈಸೂರು ಕರೆಸ್ಪಾಂಡೆನ್ಸ್ ಕಾಲೇಜಿನ ಮೇಲೆ, ಟಿ. ದಾಸರಹಳ್ಳಿ, ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್**, ಸಂಪಾದಕರು **8880334444**



*ಮೈಸೂರು ಜನತೆಗೆ ಗೌರಿ ಗಣೇಶ ಹಬ್ಬದ ಶುಭಾಶಯಗಳು*

*ಶುಭ ಕೋರುವವರು*

**ಶ್ರೀ ಕೆ. ಆರ್.ಮೋಹನ್ ಕುಮಾರ್**
ಅಧ್ಯಕ್ಷರು, ಮೂಡಾ, ಮೈಸೂರು

*ಮೈಸೂರು ಜನತೆಗೆ ಗೌರಿ ಗಣೇಶ ಹಬ್ಬದ ಶುಭಾಶಯಗಳು*

*ಶುಭ ಕೋರುವವರು*

**ಶ್ರೀ ಎಂ. ಶಿವಣ್ಣ, ಕಾರ್ಪೊರೇಟರ್**
26ನೇ ವಾರ್ಡ್,ಹೆಬ್ಬಾಳು, ಮೈಸೂರು

*ಗ್ರಾಹಕರೆಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು*

ಯುವತಿಯರಿಗಾಗಿ ಟೈಲರಿಂಗ್ ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ಕೋರ್ಸ್, ಇಂಗ್ಲೀಷ್ ಭಾಷಾ ಕಲಿಕೆ, ಕಸೂತಿ ಕೆಲಸ, ಮೆಹೆಂದಿ ಕೋರ್ಸ್‌ಗಳಿಗೆ ತರಬೇತಿ ನೀಡಲಾಗುವುದು. ಆಸಕ್ತ ಮಹಿಳೆಯರು ಸಂಪರ್ಕಿಸಿ.

**ಶ್ರೀಲಕ್ಷ್ಮಿ ಮಹಿಳಾ ತರಬೇತಿ ಸಂಸ್ಥೆ**
ನಜರ್‌ಬಾದ್, ಮೈಸೂರು ಮೊ: 9611066634.

*ಗೌರಿ ಗಣೇಶ ಹಬ್ಬದ ಶುಭಾಶಯಗಳು*

**ಜನ ಮನ ರಂಗ (ರಿ.)**
**ಮೈಸೂರು ನಗರದ ಸಮಗ್ರ ಅಭಿವೃದ್ಧಿಗಾಗಿ**
ಸಂಖ್ಯೆ 531, ವಿನಯ ಮಾರ್ಗ, 9 ನೇ ಕ್ರಾಸ್
ಸಿದ್ಧಾರ್ಥನಗರ, ಮೈಸೂರು - 570 011
ಅಧ್ಯಕ್ಷರು: ಪಿ.ಪಿ. ತಮ್ಮಣ್ಣ Mob. 9620752999

*ಗೌರಿ ಗಣೇಶ ಹಬ್ಬದ ಶುಭಾಶಯಗಳು*
*ಶುಭ ಕೋರುವವರು*

**VESTIGE**
ಶ್ರೀ ಎಸ್. ವೆಂಕಟರವಣಪ್ಪ
**Web: myvestige.com,**
**Mob: 9880759313, 9379664639**

*ಗ್ರಾಹಕರೆಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು*

**KARNATAKA SAREE CENTRE**
955, Zoo Garden Main Road, Ittigegud, Mysore-10
Wholesale Dealers:
**Kanchi, Dharmavaram, Polycotton and all kinds of Fancy Sarees**
Contact: 2433985 / 2521927 / 4276685

*ಗ್ರಾಹಕರೆಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು*

**ಧರಣಿ ಮಾತಾಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ)**

* ಮುಡಾದಿಂದ ಅಂಗೀಕೃತವಾದ ಲೇ ಔಟ್
* ಖಾಲಿ ನಿವೇಶನಗಳು ರೂ. **900** ಚ. ಅಡಿಗೆ
* ಲಲಿತಾದ್ರಿಪುರ
* ರಿಂಗ್‌ರೋಡ್‌ಗೆ **800** ಮೀ. ಹತ್ತಿರವಿದೆ.

**ಆಸಕ್ತರು ಸಂಪರ್ಕಿಸಿ.**

ಅಧ್ಯಕ್ಷರು : **ಮೋಹನ್ ಎಸ್.** ಮೊ : **7259740127**
**# 623, ಶಂಕರ ಮಠದ ಹಿಂಭಾಗದ ರಸ್ತೆ,ಚಾಮರಾಜಮೊಹಲ್ಲಾ, ಮೈಸೂರು - 24.**
ಇ- ಮೇಲ್ : **vinayasimha1970@gmail.com**


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16